ವುದು ಸದನದಲ್ಲಿ ಉತ್ತರವನ್ನು ಪಡೆಯಬೇಕು ಮತ್ತು ಉಪ–ಪ್ರಶ್ನೆಗಳನ್ನು ಕೇಳಬೇಕು, ಅವುಗಳಿಗೆ ಉತ್ತರವನ್ನು ಪಡೆಯಬೇಕು ಎನ್ನುವ ಉದ್ದೇಶದಿಂದಲೇ. ಆ ಹಕ್ಕನ್ನು ನಾವು ಅವರಿಗೆ ಒದಗಿಸಿ ಕೊಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಉತ್ತರವನ್ನು ಒದಗಿಸಿಕೊಡುತ್ತಾರೆ.....

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೇಳಿದ ಪ್ರಶ್ನೆಯು ಬೆಂಗಳೂರಿಗೆ ಸಂಬಂಧಪಟ್ಟಿದೆ. ಬೆಂಗಳೂರು ನಗರದಲ್ಲಿ ಗೃಹನಿರ್ಮಾಣ ಸಂಘಗಳಿಂದ ರಚಿಸಲಾಗಿರುವ ನಿವೇಶನಗಳ ಸಂಖ್ಯೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಂದ ರಚಿಸಲಾಗಿರುವ ನಿವೇಶನಗಳ ಸಂಖ್ಯೆಗಳನ್ನು ಕೇಳಿದ್ದೇನೆ. ಬಿ.ಡಿ.ಎ. ಇಲ್ಲಿಯೇ ಇದ್ದರೂ ಅವರಿಂದ ಉತ್ತರವನ್ನು ತರಿಸಿಕೊಳ್ಳಲಿಕ್ಕೆ ಆಗುವುದಿಲ್ಲವೇ ? ಹೋದ ಸಲದ ಅಧಿವೇಶದಲ್ಲಿಯೂ ಕೂಡ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ, ಅದು ಮಹತ್ವವಾದಂತಹ ಪ್ರಶ್ನೆಯಾಗಿತ್ತು, ಆದರೆ ಅದಕ್ಕೆ ಉತ್ತರವನ್ನು ಅಧಿವೇಶನ ಮುಗಿದ ಮೇಲೆ ನಮ್ಮ ಮನೆಯ ವಿಳಾಸಕ್ಕೆ ತಲುಪಿಸಿದರು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರುಗಳು ಪ್ರಶ್ನೋತ್ತರಗಳು ಮುಗಿದ ಮೇಲೆ ಇಂತಹ ವಿಚಾರವನ್ನು ಪ್ರಸ್ತಾಪಿಸಲಿ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪ್ರಶ್ನೆ ಇಷ್ಟೇ, ಇಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ದೊರಕಬೇಕು ಎಂದು ಸದನ ಮುಗಿಯುವುದರೊಳಗೆ ನಮಗೆ ಉತ್ತರವನ್ನು ಹೇಳಬೇಕು ಎಂದು...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು.

(INTERRUPTIONS)

ಅಧ್ಯಕ್ಷರು.—ತಾವುಗಳು ಯಾರೂ ಮಾತನಾಡಿದ್ದುದು ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಿ.

ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿನ ಅಭಿವೃದ್ಧಿ ಕಾಮಗಾರಿ ಮಂಜೂರಾತಿ ಬಗ್ಗೆ

೫೩. (೨೮೮) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು ''ಕುಡಿಯುವ ನೀರಿನ ವ್ಯವಸ್ಥೆ ಅಭಿವೃದ್ಧಿಪಡಿಸಲು'' ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಂತೆ ಈ ಕಾಮಗಾರಿ ಕೆಲಸಕ್ಕೆ ಸರ್ಕಾರದವರು ಮಂಜೂರಾತಿ ನೀಡಲಾಗಿದೆಯೇ,

ಆ) ಈ ವರ್ಷ ಇದರ ಕೆಲಸ ಪ್ರಾರಂಭವಾಗುವುದೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಕುಡಿಯುವ ನೀರಿನ ಕೊರತೆ ಇಲ್ಲ ಆದರೆ ವಿತರಣಾ ವ್ಯವಸ್ಥೆಯಲ್ಲಿ ತೊಂದರೆ ಇದ್ದು ಇದರ ನಿವಾರಣೆಗಾಗಿ ಅಂದಾಜನ್ನು ತಯಾರಿಸಲಾಗಿದ್ದು ಮಂಜೂರಾತಿ ನೀಡಬೇಕಾಗಿದೆ.

ಆ) ಪರಿಶೀಲಿಸಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಶಿರಾಳಕೊಪ್ಪದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಈಗಾಗಲೇ ೧೮ ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರಾಗಿ ಬಂದು, ಅದಕ್ಕೆ ಸರಕಾರದವರು ಮಂಜೂರಾತಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಳೆದ ಅಧಿವೇಶನದಲ್ಲಿ ಮಾಡಿಕೊಡುತ್ತೇವೆ ಎಂದು ಆಶ್ವಾಸನೆಯನ್ನು ತಾವುಗಳು ಕೊಟ್ಟಿದ್ದೀರಿ. ಅಲ್ಲಿ ಕುಡಿಯುವ ನೀರು ಚೆನ್ನಾಗಿ ಇದ್ದರೂ ಕೂಡ ಆದರೆ ಸರಿಯಾದ ವಿತರಣೆಗೆ ಸೂಕ್ತ ವ್ಯವಸ್ಥೆ ಇನ್ನೂ ಆಗಿಲ್ಲ. ಅಲ್ಲಿನ ಕುಡಿಯುವ ನೀರಿನ ತೊಂದರೆಯನ್ನು ಪರಿಹರಿಸುವಲ್ಲಿ ಈ ವರ್ಷವಾದರೂ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡಿಸಿಕೊಡುತ್ತೀರಾ ಎಂದು ದಯವಮಾಡಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಗರ ನೀರು ಸರಬರಾಜು ಸಂಸ್ಥೆಗಳಿಗೆ ಕೊಟ್ಟಿರತಕ್ಕಂತಹ ಹಣದ ಒಟ್ಟು ಮೊತ್ತವನ್ನು ಗಮನಿಸಿದಾಗ ಈಗಾಗಲೇ ಅನೇಕ ಹಂತಗಳಲ್ಲಿ ಕಾರ್ಯಗತ ಆಗಿರತಕ್ಕಂತಹ ನೀರಿನ ಕೆಲಸಗಳು ಇವೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಯೋಚನೆ ಮಾಡಿದಾಗ, ತಮ್ಮಲ್ಲಿನ ಕೆಲಸವು ಈ ವರ್ಷದಲ್ಲಿ ಆಗುತ್ತದೆಯೋ, ಇಲ್ಲವೋ ಎಂದು ಸಂಶಯ ಇದೆ. ಆದರೂ ಕೂಡ ಈ ವರ್ಷವೇ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದೇ ವಿಚಾರದಲ್ಲಿ ಕಳೆದ ಸಾರಿಯೂ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದರೂ, ಆಗಲೂ ಇದೇ ಉತ್ತರವನ್ನು ಕೊಟ್ಟಿದ್ದೆನು. ಈಗಲೂ ಅದೇ ಉತ್ತರವನ್ನು ಕೊಡುತ್ತಿದ್ದೇನೆ. ಈ ವರ್ಷ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷವೇ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ನಾನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಈ ವಿಷಯವನ್ನು ಏತಕ್ಕೆ ವಿಶೇಷವಾಗಿ ಪ್ರಸ್ತಾಪ ಮಾಡುತ್ತೇನೆಂದರೆ ಇಡೀ ಕರ್ನಾಟಕದಲ್ಲಿ ೪-೫ ಪುರಸಭೆಗಳು ಯಾವರೀತಿಯಾಗಿಯೂ ಚುನಾವಣೆ ಯಾಗದೇ ಇದ್ದರೂ ಬಹುಮತದಿಂದ ಆ ಜನರನ್ನು ಆರಿಸಿಕೊಂಡು ಅವು ಒಳ್ಳೆಯ ಪುರಸಭೆಗಳಾಗಿ ಕೆಲಸ ಮಾಡುತ್ತಾ ಇವೆ. ಅಂಥ ಕಡೆಗಳಲ್ಲಿ ಅಭಿವೃದ್ಧಿ ಕೆಲಸಗಳು ಅವ್ಯವಸ್ಥೆಯಾಗಿ ಆಲ್ಲಿರತಕ್ಕಂಥ ಮುಸ್ಲಿಂ ಜನಾಂಗಕ್ಕೂ ಮತ್ತು ಹರಿಜನ-ಗಿರಿಜನರಿಗೂ ಕುಡಿಯುವ ನೀರಿನ ವ್ಯವಸ್ಥೆ ಮತ್ತಿತರ ಸರಿಯಾದ ವ್ಯವಸ್ಥೆ ಇಲ್ಲದೆ ಅವರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ನಾನು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಹೇಗಾದರೂ ಈ ಬಡ್ಜೆಟ್ಟಿನಲ್ಲಿ ಒಟ್ಟು ೨೪೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಇಲ್ಲಿ ೨೨೪ ಜನ ಸದಸ್ಯರು ಏನು ಇದ್ದಾರೆ, ಈ ೨೨೪ ಕ್ಷೇತ್ರಕ್ಕೂ, ತಲಾ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟು ಬಿಟ್ಟರೆ ಆಯಾಯ ಕ್ಷೇತ್ರದ ಶಾಸಕರು ಅಲ್ಲಿಗೆ ಅಗತ್ಯವಾಗಿ ಬೇಕಾಗಿರತಕ್ಕಂಥ ಒಂದೊಂದು ಕೆಲಸವನ್ನಾದರೂ ಕೂಡ ಮಾಡಿಸಿಕೊಡುವುದಕ್ಕೆ ಸುಲಭವಾಗುತ್ತದೆ. ಇಲ್ಲದೇ ಹೋದರೆ ನಾವು ಆ ಜನರಿಗೆ ಏನು ಉತ್ತರ ಕೊಡಬೇಕು ಅದನ್ನಾದರೂ ಹೇಳಿ ? ದಯಮಾಡಿ ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ನೀವು ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳದೆ ಖಚಿತವಾಗಿ ಉತ್ತರ ಕೊಡಬೇಕು ಎಂದು ಕೇಳುತ್ತೇನೆ

ಶ್ರೀ ಎ. ಲಕ್ಷ್ಮೀಸಾಗರ್.—ಈ ವರ್ಷದ ಹಣಕಾಸಿನ ವ್ಯವಸ್ಥೆಯಲ್ಲಿ ಆ ಕೆಲಸವನ್ನು ಈ ವರ್ಷವೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಅಷ್ಟು ಮಾತ್ರ ಹೇಳುತ್ತೇನೆ. ಅದಕ್ಕಿಂತಲೂ ನಾನು ಜಾಸ್ತಿ ಹೇಳಲಿಕ್ಕೆ ಆಗುವುದಿಲ್ಲ. ಇದಕ್ಕೆ ಸರಿಯಾದ ಉತ್ತರ ಹೇಳಿದರೂ ನಾನು ನಿಜವಾಗಿ ಉತ್ತರ ಹೇಳುತ್ತಾ ಇಲ್ಲ ಎನ್ನುವ ತಿಳುವಳಿಕೆ ನಿಮಗೆ ಬರುವುದರಿಂದ ಈ ಬಗ್ಗೆ ನಾನು ಭರವಸೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅವರು ಖಚಿತವಾಗಿ ಆಶ್ವಾಸನೆ ಹೇಳಿಲ್ಲ.

ಅಧ್ಯಕ್ಷರು.—ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಸಚಿವರು ಈ ಇಲಾಖೆಯ ಬೇಡಿಕೆ ಬಗ್ಗೆ ಮಾತನಾಡಿದಾಗ ಈ ವರ್ಷವೇ ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೋದವರ್ಷ ಈ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದೇನೆ ಅದನ್ನು ಈಗಲೂ ಬರವಣಿಗೆಯಲ್ಲೇ ಕೊಟ್ಟಿದ್ದೇನೆ. ಹೋದವರ್ಷದ ಉತ್ತರವೇ ಈ ಸಲವೂ ಕೊಟ್ಟಿದ್ದೇನೆ. ಹೆಚ್ಚಿಗೆ ಏನೂ ಹೇಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ರೀತಿಯಾಗಿ ಮುಲತಾಯಿ ಧೋರಣೆ ಮಾಡಿದರೆ ನಮ್ಮ ಕ್ಷೇತ್ರದ ಜನರಿಗೆ ಉತ್ತರ ಹೇಳಲೂ ಹಾಗೂ ಕೆಲಸ ಮಾಡಲು ಕಷ್ಟವಾಗುತ್ತದೆ.

ಅಧ್ಯಕ್ಷರು.—ಅವರು ಈಗ ಏನು ಆಶ್ವಾಸನೆ ಕೊಟ್ಟಿದ್ದಾರೆ ಅಷ್ಟೇ ಸಾಕು. ದಯವಿಟ್ಟು ತಾವು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆಗೆ ಹೋಗೋಣ.